ಓ ಎಸ್ ನಂಃ 229/2016

ಪಿ .ಡಬ್ಲ್ಯೂ-1

ದಿನಾಂಕ 09-09-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ.ಬಿ.ಡಿ  ವಕೀಲರಿಂದಃ**

1. ಕೆಲವರಕೊಪ್ಪ ಗ್ರಾಮವು ಇನಾಮ್ ಹಳ್ಳಿ ಎಂದರೆ ಸರಿ. ಕೆಲವರಕೊಪ್ಪ ಗ್ರಾಮದಲ್ಲಿ ಕುಲಕರ್ಣಿ ಮತ್ತು ದೇಸಾಯಿರವರ ಕುಟುಂಬಕ್ಕೆ ಸೇರಿದ ಜಮೀನುಗಳು

ಹೆಚ್ಚಾಗಿ ಇವೆ ಎಂದರೆ ಸರಿ. ಸದರಿ ಗ್ರಾಮದ ಸುತ್ತಮುತ್ತಲೂ ಗುಡ್ಡಗಳು ಇವೆ ಎಂದರೆ ಸಾಕ್ಷಿಯು ಕೆಲವೊಂದು ಕಡೆ ಗುಡ್ಡ ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ಗ್ರಾಮದ ಪೂರ್ವ, ಪಶ್ಚಿಮ ಮತ್ತು ಉತ್ತರಕ್ಕೆ ಗುಡ್ಡಗಳು ಇವೆ ಎಂದರೆ ಸರಿ. ದಕ್ಷಿಣಕ್ಕೆ ಇರುವ ಮೈಲಾರ ಗುಡ್ಡ ದೇವಸ್ಥಾನದ ಸ್ಥಳವು ಸಹ ಗುಡ್ಡದಿಂದ ಕೂಡಿದೆ ಎಂದರೆ ಸರಿ. ಸದರಿ ಗುಡ್ಡಗಳ ನಡುವೆ ಇರುವ ಗ್ರಾಮವೇ ಕೆಲವರಕೊಪ್ಪ ಗ್ರಾಮ ಎಂದರೆ ಸರಿ.

2. ಕೆಲವರಕೊಪ್ಪ ಗ್ರಾಮದ ಜಮೀನುಗಳು ಹೆಚ್ಚಿಗೆ ಇಳಿಜಾರಿನ ಜಮೀನುಗಳು ಆಗಿರುತವೆ ಎಂದರೆ ಸರಿಯಲ್ಲ. ಸ.ನಂ. 111 ರ ಜಮೀನು ಕವಳಿ ಗುಡ್ಡದಲ್ಲಿ ಇರುತ್ತದೆ ಎಂದರೆ ಸರಿ. 01-03-1974 ರಲ್ಲಿ ಕುಲಕರ್ಣಿ ಮತ್ತು ದೇಶಪಾಂಡೆ ರವರ ಜಮಿನುಗಳು ಸರಕಾರಕ್ಕೆ ನಿಹಿತ ಆಗಿರುತ್ತವೆ ಎಂದರೆ ಸರಿಯಲ್ಲ. ಸದರಿಯವರ ಕುಟುಂಬಕ್ಕೆ ಸೇರಿದ ಮನೆಗಳು ಕೆಲವರಕೊಪ್ಪ ಗ್ರಾಮದಲ್ಲಿ ಇವೆ. ಸದರಿಯವರ ಕುಟುಂಬದ ಮನೆಗಳು ತಳವಾರ ಕೇರಿಯಲ್ಲಿ ಇರುತ್ತವೆ. ಸದರಿ ಮನೆಗಳು ಈಗ ಅವರ ಸ್ವಾಧೀನದಲ್ಲಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಕುಲಕರ್ಣಿ ಮತ್ತು ದೇಶಪಾಂಡೆ ರವರ ಕುಟುಂಬದವರು ಅವರಿಗೆ ಸೇರಿದ ಮನೆಗಳನ್ನು ಬೇರೆ ವ್ಯಕ್ತಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ವ್ಯಕ್ತಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ಅವರ ಹೆಸರುಗಳು ನೆನಪಿಲ್ಲ. ಸಾಕ್ಷಿಯು ಮುಂದುವರೆದು ಕೆಲವರಿಕೊಪ್ಪ ಗ್ರಾಮಸ್ಥರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರ ಮನೆಗಳನ್ನು ನಮ್ಮ ಗ್ರಾಮದ ಜನರಿಗೆ ಮಾರಾಟ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಸ ನಂ. 111 ರ ಒಟ್ಟು 32 ಎಕರೆ 02 ಗುಂಟೆ ಜಮೀನುಗಳು ಅವಳಿ ಗುಡ್ಡದ ಜಾಗದಲ್ಲಿ ಇಳಿಜಾರಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದು ವರೆದು ಸಮತಟ್ಟಿನಿಂದ ಕೂಡಿರುತ್ತದೆ ಎಂದು ನುಡಿಯುತ್ತಾರೆ.  ಸ ನಂ. 111 ರ ಉಳಿಕೆ ಜಮೀನಾದ 32 ಎಕರೆ 02 ಗುಂಟೆ

ಜಮೀನನ್ನು ದೇಸಾಯಿ ಕುಟುಂಬದವರು ಬೇರೆ ಬೇರೆ ರೈತರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಸಂಪೂರ್ಣ ವಿಸ್ತೀರ್ಣವನ್ನು ರೈತರಿಗೆ ಮಾರಾಟ ಮಾಡಿರುತ್ತಾರೆ. ಯಾವ ಯಾವ ರೈತರಿಗೆ ಮಾರಾಟ ಮಾಡಿದ್ದಾರೆ ಎಂದು ಅವರ ಹೆಸರುಗಳು ನನಗೆ ನೆನಪಿಲ್ಲ. ಸದರಿ 32 ಎಕರೆ 02 ಗುಂಟೆ ಜಮೀನು ಸರಕಾರಕ್ಕೆ ಸೇರಿದ ಜಮೀನು ಎಂದರೆ ಸರಿಯಲ್ಲ. ಸದರಿ ಜಮಿನು ದೇಸಾಯಿ ಕುಟುಂಬದ ಮಾಲಿಕತ್ವಕ್ಕೆ ಸೇರಿದ ಜಮೀನಾಗಿರುತ್ತದೆ. ಸದರಿ ಜಮೀನನ್ನು ದೇಸಾಯಿ ಕುಟುಂಬದವರು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿಯ ಪೂರ್ವಕ್ಕೆ ಇರುವ ಬ್ಲಾಕ್ ನಂಃ 3 ರ ಜಮಿನಿನಲ್ಲಿ ನನಗೆ ಸೇರಿದ 2 ಎಕರೆ ಜಮಿನು ಇದ್ದು ಅದಕ್ಕೆ ಸೇರಿದಂತೆ ಮಾರಣ್ಣನವರ ಜಮಿನು ಸಹ ಇರುತ್ತದೆ. ದಾವಾ ಷೆಡ್ಯೂಲ್ ನಲ್ಲಿ ಪೂರ್ವಕ್ಕೆ ತೋರಿಸಿರುವ ಬ್ಲಾಕ್ ನಂ.3 ರ ಜಮೀನು ನನ್ನದೇ ಎಂದು ತೋರಿಸಿರುವುದಿಲ್ಲ ಎಂದರೆ ಸರಿ. ಪಶ್ಚಿಮಕ್ಕೆ ತೋರಿಸಿರುವ ಬ್ಲಾಕ್ ನಂಃ1 ರ ಜಮೀನು ಮೂಲತಃ ದೇಸಾಯಿ ರವರಿಗೆ ಸೇರಿದ್ದಾಗಿದ್ದು ಅದನ್ನು ಈಗ ಬೇರೆ ಗ್ರಾಮದ ರೈತರಿಗೆ ಮಾರಾಟ ಮಾಡಿರುತ್ತಾರೆ. ದಾವಾ ಆಸ್ತಿಯ ಉತ್ತರಕ್ಕೆ ಬ್ಲಾಕ್ ನಂಃ3 ರ ಜಮೀನು ಇರುವುದಿಲ್ಲ. ಆದರೆ ಸ ನಂಃ 112 ರ ಜಮೀನು ಮಾತ್ರ ಇರುತ್ತದೆ. ನನ್ನ ಪ್ರಮಾಣ ಪತ್ರಿಕೆಯಲ್ಲಿ ದಾವಾ ಆಸ್ತಿಯ ಉತ್ತರಕ್ಕೆ ಬ್ಲಾಕ್ ನಂಃ3 ರ ಜಮೀನು ಇದೆ ಎಂದು ತೋರಿಸಿರುವುದು ತಪ್ಪು. ದಾವಾ ಆಸ್ತಿಯ ದಕ್ಷಿಣಕ್ಕೆ ತೋರಿಸಿರುವ ಬ್ಲಾಕ್ ನಂಃ1 ಮತ್ತು 4 ರ ಜಮೀನುಗಳು ಸ ನಂಃ 111/ಬ ರ ಜಮೀನಿನಲ್ಲಿ ಇರುತ್ತವೆ. ಸದರಿ ಬ್ಲಾಕ್ ನಂಃ 1 ಮತ್ತು 4 ಜಮೀನುಗಳ ಮಾಲೀಕರು ರುದ್ರಪ್ಪ ಮತ್ತು ಶಿವಪ್ಪ ರವರು ಆಗಿರುತ್ತಾರೆ. ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದ ಪತ್ರ ಮತ್ತುನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ತೋರಿಸಿರುವ ಚಕ್ಕುಬಂದಿಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಆಸ್ತಿಯ ಚಕ್ಕುಬಂದಿಗಳಲ್ಲಿ ಮಾಲೀಕರ ಹೆಸರುಗಳು ಗೊತ್ತಿಲ್ಲದೇ ಇರುವುದ ರಿಂದ ಬ್ಲಾಕ್ ನಂಬರಗಳಿಂದ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

5. ಸ. ನಂಃ 112/ಬ 3 ಮತ್ತು 112/ಅ 1 ರ ಪಹಣಿ ಪತ್ರಿಕೆಗಳನ್ನು ನಾನು ನೋಡಿರುವುದಿಲ್ಲ. ಸ ನಂ.112/ಬ 3 ಮತ್ತು 112/ಅ 1 ರ ಜಮೀನುಗಳು ಪ್ರತಿವಾದಿ ಗಳಿಗೆ ರೈತಾಪಿ ಜಮಿನುಗಳು ಎಂದರೆ ಸಾಕ್ಷಿಯು ಸ ನಂಃ 112 ರ ಜಮೀನು ಗಳು ಅವರ ಜಮೀನು ಗಳು ಎಂದು ನುಡಿಯುತ್ತಾರೆ. ಸ ನಂಃ 112 ರ ಜಮೀನು ಸ ನಂಃ 112/ಬ 3 ಮತ್ತು 112/ಅ 1 ಎಂದು ಎರಡು ಭಾಗಗಳಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸ ನಂಃ 112/ಬ 3 ರ ಜಮೀನಿನ ವಿಸ್ತೀರ್ಣ 1 ಎಕರೆ 3 ಗುಂಟೆ ಇದೆ

ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಸ ನಂಃ 112/ಅ 1 ರ ಜಮೀನಿನ ವಿಸ್ತೀರ್ಣ 3 ಎಕರೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸ ನಂಃ 112/ಅ 1 ಮತ್ತು 112/ಬ 3 ರ ಒಟ್ಟು ಜಮೀನಿನ ಪೂರ್ವಕ್ಕೆ ಮಾರಣ್ಣನವರಿಗೆ ಸೇರಿದ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನುಗಳ ಪಶ್ಚಿಮಕ್ಕೆ ಓಡಾಡಲು ದಾರಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆದರೆ ಗ್ರಾಮದ ಎಲ್ಲಾ ಜನರು ಆಪಸಾತಿನಲ್ಲಿ ಓಡಾಡುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳ ಪಶ್ಚಿಮಕ್ಕೆ ಓಡಾಡಲು ದಾರಿ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆಪಸಾತಿನಲ್ಲಿ ಸದರಿ ದಾರಿಯ ಮುಖಾಂತರ ಓಡಾಡುತ್ತಾರೆ ಎಂದು ನುಡಿಯುತ್ತಾರೆ. ಸ ನಂಃ 112/ಅ 1 ಮತ್ತು 112/ಬ 3 ರ ಜಮೀನುಗಳಿಗೆ ಪಶ್ಚಿಮಕ್ಕೆ ಇರುವ ದಾರಿಯನ್ನು ಹೊರತುಪಡಿಸಿ ಬೇರೆ ದಾರಿ ಇಲ್ಲಾ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಬೇರೆ ದಿಕ್ಕುಗಳಿಂದಲೂ ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ಪೂರ್ವ ಮತ್ತು ಪಶ್ಚಿಮದ ಎರಡೂ ದಿಕ್ಕುಗಳಲ್ಲೂ ದಾರಿ ಇರುತ್ತದೆ.

6. ಸದರಿ ಪೂರ್ವದ ದಿಕ್ಕಿಗೆ ಇರುವ ದಾರಿಯು ಶಿವಪ್ಪ ಮಾಳಾಪೂರರವರ ಜಮೀನಿನಲ್ಲಿ ಇರುತ್ತದೆ. ಶಿವಪ್ಪ ಮಾಳಾಪೂರ ರವರ ಜಮೀನಿನಲ್ಲಿ ದಾರಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಸ ನಂಃ 112/ಅ 1 ಮತ್ತು ಸನಂಃ 112/ಬ 3 ಉತ್ತರಕ್ಕೆ ಶಿವಪ್ಪ ಮಕರವಳ್ಳಿ ರವರ ಸ ನಂಃ 112 ರಲ್ಲಿ ಇರುವ ಮತ್ತೊಂದು ಫೂಟ್ ಹಿಸ್ಸಾದ ಜಮೀನು ಇದೆ ಎಂದರೆ ಸರಿ. ಸದರಿ ಜಮೀನುಗಳ ದಕ್ಷಿಣ ದಿಕ್ಕಿಗೆ ಮಾರಣ್ಣನವರ ಜಮೀನು ಬರುತ್ತವೆ ಎಂದರೆ ಸರಿಯಲ್ಲ. ಮಾರಣ್ಣನವರ ಜಮೀನು ದಕ್ಷಿಣ ದಿಕ್ಕಿಗೆ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲಿನ ಚಕ್ಕುಬಂದಿಯಲ್ಲಿ ಮಧ್ಯದಲ್ಲಿ ಬರುವ ಸ ನಂಃ 112/ಅ 1 ಮತ್ತು 112/ಬ 3 ಜಮೀನು ಗಳು ಪ್ರತಿವಾದಿಯರ ಸ್ವಾಧೀನದಲ್ಲಿವೆ ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರುತ್ತಾರೆ. ಆದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ